ಈ) ಪುನರ್ ವಸತಿ ಸಮಿತಿಯ ವರದಿಯನ್ನು ಪರಿಶೀಲಿಸಿ ಕ್ರಮವನ್ನು ಕೈಗೊಳ್ಳಲಾಗುವುದು.

ಅಂಗವಿಕಲರ ಕಲ್ಯಾಣಕ್ಕಾಗಿ ಪ್ರತ್ಯೇಕ ಹಣಕಾಸು ಸಂಸ್ಥೆ

771(412) ಶ್ರೀ ರಾಮದಾಸ್.ಎ (ಕೃಷ್ಣರಾಜ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಅಂಗವಿಕಲರ ಕಲ್ಯಾಣಕ್ಕಾಗಿ ಪ್ರತ್ಯೇಕವಾದ ಹಣಕಾಸು ಸಂಸ್ಥೆಯನ್ನು ಸ್ಥಾಪಿಸಲಾಗಿದೆಯೇ? ಯಾವಾಗ ಸ್ಥಾಪಿಸಲಾಯಿತು? ಇದರ ಉದ್ದೇಶಗಳೇನು?

ಆ) ಹಣಕಾಸು ಸಂಸ್ಥೆಗೆ ಕಳೆದ 2 ವರ್ಷಗಳಿಂದ ನೀಡಿರುವ ಬಜೆಟ್ ಎಷ್ಟು? ಯಾವ ರೂಪದಲ್ಲಿ ಈ ಹಣ ಉಪಯೋಗವಾಗಿದೆ?

ಇ) ಈ ಹಣಕಾಸು ಸಂಸ್ಥೆ ಎಲ್ಲಿ ಸ್ಥಾಪನೆಯಾಗಿದೆ; ಈವರೆಗೆ ಎಷ್ಟು ಜನ ಅಂಗವಿಕಲರಿಗೆ ಯಾವ ಯಾವ ಉದ್ಯೋಗಗಳನ್ನು ಮಾಡಲು ಹಣಕಾಸು ಸಹಾಯ ನೀಡಲಾಗಿದೆ?

ಈ) ನಿರೀಕ್ಷಿತ ಮಟ್ಟದಲ್ಲಿ ಈ ಹಣಕಾಸು ಸಂಸ್ಥೆ ಕಾರ್ಯನಿರ್ವಹಿಸುತ್ತಿದೆಯೇ? ಇಲ್ಲವಾದಲ್ಲಿ ನಿರ್ವಹಣೆಗೆ ಆಗಿರುವ ತೊಂದರೆಗಳೇನು? ಪ್ರಸ್ತುತ ಸಾಲಿನಲ್ಲಿ ಈ ಹಣಕಾಸು ಸಂಸ್ಥೆಯ ಕಾರ್ಯಯೋಜನೆಗಳೇನು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) ಇಲ್ಲಾ

ಆ) 2000-01ನೇ ಸಾಲಿನಲ್ಲಿ ರೂ. 20.00 ಲಕ್ಷಗಳು ಒದಗಿಸಿದೆ. ಕರ್ನಾಟಕ ರಾಜ್ಯದಲ್ಲಿ ಅಂಗವಿಕಲರ ಕಲ್ಯಾಣಕ್ಕಾಗಿ ಪ್ರತ್ಯೇಕವಾದ ಹಣಕಾಸು ಸಂಸ್ಥೆಯನ್ನು ಸ್ಥಾಪಿಸದೇ ಇದ್ದ ಕಾರಣ ಈ ಆಯವ್ಯಯವನ್ನು ಅಂಗವಿಕಲರ ಕಲ್ಯಾಣ (ಕಟ್ಟಡಗಳು) (ಯೋಜನೆ)ಗೆ ಮರುಹೊಂದಾಣಿಕೆ ಮಾಡಿ ಮೈಸೂರಿನ ಹೆಲನ್‌ಕೆಲ್ಲರ ಅಂಧ ಮಕ್ಕಳ ಶಿಕ್ಷಕ ತರಬೇತಿ ಕೇಂದ್ರದ ಹೊಸ ಕಟ್ಟಡವನ್ನು ನಿರ್ಮಿಸಲು ರೂ. 15 ಲಕ್ಷ ಹಾಗೂ ಮೈಸೂರಿನ ಕಿವುಡು ಮಕ್ಕಳ ಸರ್ಕಾರಿ ಶಾಲೆಯಲ್ಲಿ ಊಟದ ಹಾಲ್ ನಿರ್ಮಿಸಲು ರೂ. 5 ಲಕ್ಷದಂತೆ ಒಟ್ಟು ರೂ. 20 ಲಕ್ಷಗಳ ವೆಚ್ಚ ಭರಿಸಲಾಗಿರುತ್ತದೆ.

2001-02ನೇ ಸಾಲಿನಲ್ಲಿ ರೂ. 20 ಲಕ್ಷ ಆಯವ್ಯಯ ಒದಗಿಸಿದ್ದು, ನಂತರ ಪರಿಷ್ಕೃತ ಆಯವ್ಯಯದಲ್ಲಿ ಸರ್ಕಾರವು ಹಿಂದಕ್ಕೆ ಪಡೆದಿರುತ್ತದೆ.

ಇ) ಅನ್ವಯಿಸುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ಉತ್ತರ ಕನ್ನಡ ಜಿಲ್ಲೆಯಲ್ಲಿನ ಅಂಗನವಾಡಿ ಕೇಂದ್ರಗಳಿಗೆ ಕಟ್ಟಡ

772(887) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಇರುವ ಒಟ್ಟು ಅಂಗನವಾಡಿ ಕೇಂದ್ರಗಳೆಷ್ಟು?

ಆ) ಎಷ್ಟು ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡವಿದೆ?